# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:20.02.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.16 ಜಾಲಹಳ್ಳಿಯಲ್ಲಿ ಶ್ರೀ ಹೆಚ್. ಎಸ್. ದಯಾನಂದ, (ಸ.ಕಾ.ನಿ.ಅ,ಕೆಂಗೇರಿ) ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ಹೆಚ್. ಎಸ್. ದಯಾನಂದ | ಸ.ಕಾ.ನಿ.ಅ., ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ ರಘುನಾಥ್ ಟಿ. | ಹಿರಿಯ ಆರೋಗ್ಯ ಪರಿವೀಕ್ಷಕರು |
| 3 | ಶ್ರೀ ರವಿಕುಮಾರ್ ಕೆ. ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ವೇಣು, | ಕಂದಾಯ ವಸೂಲಿಗಾರರು |
| 5 | ಶ್ರೀ ರೋಹಿತ್ ಎಂ. ನೇತ್ರೇಕರ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 6 | ಶ್ರೀ ಮಂಜುನಾಥ ಡಿ. ಹೆಚ್. | ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್‌ಎಸ್‌ಬಿ |
| 7 | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾ. ಆ. ಕೇಂ. | ಪ್ರಾ. ಆ. ಕೇಂ.ದ ಪರವಾಗಿ ಶುಶ್ರೂಷಕಿಯರು ಹಾಜರಿದ್ದರು |
| 8 | ಶ್ರೀ ಅಶ್ವಥಯ್ಯ | ಎ.ಎಸ್.ಐ. ಜಾಲಹಳ್ಳಿ ಪೋಲಿಸ್ ಠಾಣೆ |
| 9 | ಶ್ರೀ ಶ್ರೀನಿವಾಸ | ಮೇಲ್ವಿಚಾರಕರು |
| 10 | ನಾಗರಾಜ್ | ಮೇಲ್ವಿಚಾರಕರು |
| 11 | ಕಾಂತರಾಜು | ವಾರ್ಡ್ ಮಾರ್ಷಲ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) 2021-22ರ ಬಿಬಿಎಂಪಿ ಆಯವ್ಯಯದ ಕುರಿತು:-**

ಬಿ.ಇ.ಎಲ್. ಸರ್ಕಲ್ ಮತ್ತು ಹೆಚ್‌ಎಂಟಿ ಕ್ರೀಡಾಂಗಣದ ಬಳಿ ಸಿ. ಸಿ. ಕ್ಯಾಮರಾಗಳನ್ನು ಅಳವಡಿಸಲು 2021-22ರ ಬಿಬಿಎಂಪಿ ಬಜೆಟ್‌ನಲ್ಲಿ ಸೇರಿಸಿಕೊಳ್ಳಲು ಜಾಲಹಳ್ಳಿ ಪೋಲೀಸ್ ಠಾಣೆಯ ಎ.ಎಸ್.ಐ. ಅಶ್ವಥಯ್ಯ ರವರು ಸಭೆಯಲ್ಲಿ ಕೋರಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ಜಾಲಹಳ್ಳಿಯಲ್ಲಿ ಡ್ರೈ ವೇಸ್ಟ್ ಸೆಂಟರ್ ಅವಶ್ಯಕವಾಗಿದ್ದು, 2021-22ರ ಬಿಬಿಎಂಪಿ ಬಜೆಟ್‌ನಲ್ಲಿ ಅನುವು ಮಾಡಿಕೊಂಡು ನಿರ್ಮಿಸಿಕೊಡಲು ಪ್ರಸ್ತಾಪಿಸಿದರು.

2) ಕೋವಿಡ್-19 ಬಗ್ಗೆ:-

ನೆರೆಹೊರೆಯ ರಾಜ್ಯಗಳಲ್ಲಿ ಕೊರೋನಾ 2ನೇ ಅಲೆ ಆರಂಭಗೊಂಡಿದ್ದು, ಕೋವಿಡ್-19ರ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ, ರಾಜ್ಯದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಸಾರ್ವಜನಕರು ತಪ್ಪದೇ ಮಾಸ್ಕ್ ಧರಿಸಲು ಹಾಗೂ ವ್ಯಕ್ತಿಗತ ಅಂತರವನ್ನು ಕಾಯ್ದುಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಧ್ಯಕ್ಷರು ತಿಳಿಸಿದರು.

ರಾಜ್ಯ ಕೊರೊನಾ ವಾರಿಯರ್ಸ್‌ಗಳಾದ ಆರೋಗ್ಯ ಸಿಬ್ಬಂದಿಗಳು ಹಾಗೂ ಪಾಲಿಕೆ ಸಿಬ್ಬಂದಿಗಳು ಕೋವಿಡ್ ಚುಚ್ಚುಮದ್ದು 2ನೇ ಹಂತದ ಲಸಿಕೆ ತೆಗೆದುಕೊಂಡಿರುವ ಬಗ್ಗೆ ಅಧ್ಯಕ್ಷರು ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿದರು.

3) ಬಿಡಬ್ಲ್ಯೂಎಸ್‌ಎಸ್‌ಬಿ :-

ಬಿಡಬ್ಲ್ಯೂಎಸ್‌ಎಸ್‌ಬಿ ಸ್ಯಾನಿಟರಿ ಕಟಿಂಗ್ ಮಾಡಿ, ರಸ್ತೆಯನ್ನು ದುರಸ್ತಿಗೊಳಿಸದೇ ಹಾಗೆಯೇ ಬಿಟ್ಟಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರು ವಾರ್ಡ್ ಸಹಾಯಕ ಅಭಿಯಂತರರಿಗೆ ದೂರು ಸಲ್ಲಿಸಿರುತ್ತಾರೆ. ಮಾನ್ಯ ಅಧ್ಯಕ್ಷರು ಮಾತನಾಡಿ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ರಸ್ತೆಯನ್ನು ದುರಸ್ತಿಗೊಳಿಸುವ ಬಗ್ಗೆ ಸೂಚಿಸಿದರು.

3) ಬೆಸ್ಕಾಂ ಇಲಾಖೆ:-

ಬೆಸ್ಕಾಂ ಸಹಾಯಕ ಅಭಿಯಂತರರು ಮಾತನಾಡಿ, ಜಾಲಹಳ್ಳಿ ಯುಕೋ ಬ್ಯಾಂಕ್‌ನಿಂದ ಪ್ರೆಸ್ಟೀಜ್ ಕೆನ್ಸಿಂಗ್‌ಟನ್ ಗಾರ್ಡನ್ಸ್‌ವರೆಗೆ ಹಾಗೂ ಎಸ್.ಎಂ. ರಸ್ತೆವರೆಗೂ ರಸ್ತೆ ಬದಿಯಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಬೇಕಾಗಿದ್ದು, ಲೈನ್ ಅಳವಡಿಸಲು ಮರಗಳ ರೆಂಬೆ ಕೊಂಬೆಗಳು ಅಡಚಣೆಯುಂಟು ಮಾಡುತ್ತಿರುವುದರಿಂದ ಸದರಿ ರಸ್ತೆಯಲ್ಲಿನ ಮರಗಳ ರೆಂಬೆ ಕೊಂಬೆಗಳನ್ನು ತೆರವುಗೊಳಿಸಿಕೊಡಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡಿ, ಯಶವಂತಪುರ ಉಪ ವಿಭಾಗದ ವತಿಯಿಂದ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು (ಆರ್.ಎಫ್.ಓ) ರವರಿಗೆ ಪತ್ರ ವ್ಯವಹರಿಸಿ, ಕ್ರಮವಹಿಸಲು ಸೂಚಿಸಿದರು.

5) ಘನತ್ಯಾಜ್ಯಗಳ ನಿರ್ವಹಣೆ ಕುರಿತು:-

ವಾರ್ಡ್ ಮಾರ್ಷಲ್ ಸಭೆಯಲ್ಲಿ ಮಾತನಾಡಿ, ವಾರ್ಡ್ ಪರಿಮಿತಿಯಲ್ಲಿ ಘನತ್ಯಾಜ್ಯ ಕಾಲಕಾಲಕ್ಕೆ ವಿಲೇವಾರಿಯಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ, ಮಾನ್ಯ ಅಧ್ಯಕ್ಷರು ಮಾತನಾಡಿ ಘನತ್ಯಾಜ್ಯವನ್ನು ಒಣ ಕಸ ಮತ್ತು ಹಸಿ ಕಸವಾಗಿ ವಿಂಗಡಿಸಲು ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಮೇಲ್ವಿಚಾರಕರಿಗೆ ಸೂಚಿಸಿದರು. ಇದಕ್ಕೆ ಮೇಲ್ವಿಚಾರಕರು ಮಾತನಾಡಿ, ತ್ಯಾಜ್ಯವನ್ನು ಒಣ ಕಸ, ಹಸಿ ಕಸ

ವಿಂಗಡಿಸಲು ನಮ್ಮ ಬಳಿ ಪೌರ ಕಾರ್ಮಿಕರ ಕೊರತೆಯಿದ್ದು, ಆಟೋಗಳಿಗೆ ಒಬ್ಬ ಡ್ರೈವರ್ ಮತ್ತು ಒಬ್ಬ ಹೆಲ್ಪರ್ ನಿಯೋಜಿಸಿಕೊಡಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿದರು. ಅದಕ್ಕೆ ಅಧ್ಯಕ್ಷರು ಮಾತನಾಡಿ, ತಮ್ಮಲ್ಲಿ ಲಭ್ಯವಿರುವ ಪೌರ ಕಾರ್ಮಿಕರ ಸಹಯೋಗದೊಂದಿಗೆ ವಿಂಗಡಣೆ ಮಾಡಲು ಸೂಚಿಸಿದರು.

ಕೊನೆಯದಾಗಿ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:16

(ಹೆಚ್. ಎಸ್. ದಯಾನಂದ)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:16